47.46 ಕೋಟಿ ರೂ.ಗಳ 11,865 ಹೆಕ್ಟೇರ್ ಪ್ರದೇಶದಲ್ಲಿ ಈ ಒಂದು ಯೋಜನೆಯ ಅಡಿಯಲ್ಲಿ ಅದು ಬರುತ್ತದೆ. ಅದನ್ನು ಕೂಡಲೇ ಪ್ರಾರಂಭ ಮಾಡುತ್ತೇವೆ. ಇದು ಕೇವಲ ಸರ್ಕಾರ ಮತ್ತು ಇಲಾಖೆಯಿಂದ ಸಾಧ್ಯವಿಲ್ಲ, ಅಲ್ಲಿಯ ರೈತರ ಸಹಕಾರ ಕೂಡ ಬಹಳ ಬೇಕಾಗುತ್ತದೆ. ಆ ನಿಟ್ಟಿನಲ್ಲಿ ಒಂದು ವಿಶೇಷವಾದ ಸಭೆಯನ್ನು ಆ ಭಾಗದ ಶಾಸಕರನ್ನು ಮತ್ತು ಇತರ ಕಾಡಾ ಅಧಿಕಾರಿಗಳನ್ನು ಕರೆದು ಈ ಹಣ ಮಂಜೂರಾದ ತಕ್ಷಣವೇ ನಾವು ಒಂದು ಆಂದೋಲನದ ರೂಪದಲ್ಲಿ ಯಾವಾಗ ನಮ್ಮ ನೀರಾವರಿ ಫ್ರೀ ಟೈಮ್ ಇರುತ್ತದೆ ಆ ಟೈಮ್‌ದಲ್ಲಿ ಇದನ್ನು ಒಂದು ಆಂದೋಲನದ ರೂಪದಲ್ಲಿ ಒಂದು ಸಲಕ್ಕೆ, ಏಕೆಂದರೆ ಆ ಡ್ರೈನೇಜ್ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಿ ನಿಂತುಕೊಳ್ಳುವುದು ಆಗಬಾರದು. ಒಂದೇ ಸಲಕ್ಕೆ ಆ ಡ್ರೈನೇಜ್‌ನ್ನು ತೆಗೆದು ನೀರನ್ನು ಹೊರಗೆ ಚೆಲ್ಲಿ ಸವಳು-ಜವಳು ಮಾಡಿ soil reclay ಮಾಡಬೇಕು. ಬರಿ ನಾವು ನೀರನ್ನು ಹೊರಕ್ಕೆ ಚೆಲ್ಲಿದರೆ ಸಾಕಾಗುವುದಿಲ್ಲ. ಆ soilಗಳಿಗೆ strengthen ಮಾಡಬೇಕಾಗುತ್ತದೆ. ಆದ್ದರಿಂದ ನಾವು, Agriculture Department, Revenue Department, Agriculture University and KADA ಎಲ್ಲರೂ ಸೇರಿ ಒಂದು ಆಂದೋಲನ ರೂಪದಲ್ಲಿ ಮಾಡುತ್ತೇವೆ. ಈ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಇದಕ್ಕೊಂದು ಪರಿಹಾರವನ್ನು ಒದಗಿಸಿ ಕೊಡುತ್ತೇವೆ.

ಶಾಶ್ವತ ಕುಡಿಯುವ ನೀರು

90 (570) ಶ್ರೀ ಸಂಪಂಗಿ ಎನ್. ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೇತ್ರಾವತಿ ಹಾಗೂ ಹೇಮಾವತಿ ನದಿಗಳ ನೀರನ್ನು ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ಕೋಲಾರ ಜಿಲ್ಲೆಗಳಿಗೆ ಹರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಆ) ಈ ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಶಾಶ್ವತ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಸರ್ಕಾರಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು; ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬರುವ ಅನುದಾನ ಎಷ್ಟು;

ಈ) ಶಾಶ್ವತ ಕುಡಿಯುವ ನೀರಿನ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ನೇತ್ರಾವತಿ ತಿರುವು ಯೋಜನೆಯಿಂದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸುವ ಪ್ರಸ್ತಾವ ಇರುತ್ತದೆ.

ನೇತ್ರಾವತಿ ನದಿಯ ಉಪನದಿಯಾದ ಎತ್ತಿನಹೊಳೆ ತಿರುವು ಯೋಜನೆಯಿಂದ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಪ್ರಸ್ತಾವನೆಯು ಸಹ ಪರಿಶೀಲನೆಯಲ್ಲಿದೆ.

ಭದ್ರಾ ಮೇಲ್ದಂಡೆ ಯೋಜನೆಯಡಿ ಕೋಲಾರ ತಾಲ್ಲೂಕಿನ 19 ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ ತಯಾರಿಸಲಾಗಿದೆ.

ಆ) ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಹೆಚ್ಚುವರಿ ನೀರನ್ನು ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿಗಾಗಿ ಬಳಸಲು ಶ್ರೀ ಜಿ.ಎಸ್. ಪರಮಶಿವಯ್ಯನವರು ಯೋಜನೆಯನ್ನು ರೂಪಿಸಿದ್ದು, ಇದರ ವಿವರವಾದ ಯೋಜನಾ ವರದಿಯು ತಯಾರಿಕಾ ಹಂತದಲ್ಲಿದೆ.

ಎತ್ತಿನಹೊಳೆಯಿಂದ ಸುಮಾರು 10 ಟಿಎಂಸಿ ನೀರನ್ನು ಎತ್ತಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲು ಉದ್ದೇಶಿಸಿರುವ ಯೋಜನೆಯ ತಾಂತ್ರಿಕ ಶಕ್ಯತಾ ವರದಿಯನ್ನು ತಯಾರಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯಡಿ ಕೋಲಾರ ತಾಲ್ಲೂಕಿನ 19 ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯಿದ್ದು, ಇದರ ಸರ್ವೆ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆ.

ಇ) ನೇತ್ರಾವತಿ ತಿರುವು ಯೋಜನೆಯ ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ ಇದಕ್ಕೆ ತಗಲುವ ವೆಚ್ಚ ಎಷ್ಟೆಂಬುದು ತಿಳಿಯಬಹುದಾಗಿರುತ್ತದೆ.

ಎತ್ತಿನಹೊಳೆ ತಿರುವು ಯೋಜನೆಯ ಶಕ್ಯತಾ ವರದಿಯನ್ನು ತಯಾರಿಸಲಾಗಿದೆ. ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ, ನಿಖರವಾದ ಅಂದಾಜು ಮೊತ್ತ ನಿರ್ಧಾರವಾಗುವುದು.

ಮೇಲಿನ ಯೋಜನೆಗಳಿಗೆ, 2011–12ನೇ ಸಾಲಿನ ಮುಂಗಡ ಪತ್ರದಲ್ಲಿ ಪ್ರಾರಂಭಿಕವಾಗಿ ರೂ. 200.00 ಕೋಟಿಗಳ ಅನುದಾನವನ್ನು ಒದಗಿಸಿರುವುದಾಗಿ ಮಾನ್ಯ ಮುಖ್ಯ ಮಂತ್ರಿಗಳ ಭಾಷಣದಲ್ಲಿ ಘೋಷಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಪ್ರಸ್ತಾಪಿತ ಕೋಲಾರ ತಾಲ್ಲೂಕಿನ 19 ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ರೂ. 10.09 ಕೋಟಿಗಳ ಅಂದಾಜು ತಯಾರಿಸಲಾಗಿದೆ.

ಈ) ನೇತ್ರಾವತಿ ತಿರುವು ಯೋಜನೆಯ ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ ಕಾಮಗಾರಿ ಕೈಗೊಳ್ಳುವ ಬಗ್ಗೆ ತೀರ್ಮಾನಿಸಲಾಗುವುದು.

ಎತ್ತಿನಹೊಳೆ ತಿರುವು ಯೋಜನೆಯ ವಿವರವಾದ ವರದಿಯ ತಯಾರಿಕೆಯ ನಂತರ, ಯೋಜನೆ ಆರಂಭಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ನೀರಾವರಿ ನಿಗಮದ ವಾರ್ಷಿಕ ಕಾಮಗಾರಿ ಕಾರ್ಯಕ್ರಮದಲ್ಲಿ ಅನುದಾನ ಒದಗಿಸಲಾಗುವುದು ಹಾಗೂ ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎನ್.ಸಂಪಂಗಿ: ಮಾನ್ಯ ಸಚಿವರು ಉತ್ತರ ಏನೋ ಕೊಟ್ಟಿದ್ದಾರೆ. ಆದರೆ ಎಲ್ಲಾ ಭರವಸೆ ಅಷ್ಟೆ. ಆದರೆ ಯಾವಾಗ ಮಾಡುತ್ತೇನೆ, ಹೇಗೆ ಮಾಡುತ್ತೇನೆ, ನೀರು ಕೊಡುತ್ತೇವೆ ಅಥವಾ ಇಲ್ಲವೆ ಉತ್ತರದಲ್ಲಿ ಏನು ಕೊಟ್ಟಿಲ್ಲ. ಏಕೆಂದರೆ ನಾನು ಕೇಳಿರುವುದು ನೇತ್ರಾವತಿ ಮತ್ತು ಹೇಮಾವತಿ ನದಿಯ ನೀರನ್ನು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಹರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ ಎಂದು ಕೇಳಿರುವ ಪ್ರಶ್ನೆಗೆ, ಬರಿ ಕೋಲಾರ ಜಿಲ್ಲೆಗೆ 19 ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ ತಯಾರಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದುವರೆಗೆ ಚಿಕ್ಕಬಳ್ಳಾಪುರ ಏನಾಗಿದೆ ಬೇರೆ ತಾಲ್ಲೂಕುಗಳು ಏನಾಗಿದೆ? ಕುಡಿಯುವ ನೀರಿನ ಏನು ಸಮಸ್ಯೆಯನ್ನು ಪರಿಹಾರಕ್ಕೆ ತಾವು ಏನು ಮಾಡುತ್ತೀರಿ? ಈಗ ಚಿಕ್ಕಬಳ್ಳಾಪುರ ಜಿಲ್ಲೆಗೆ ಏನು ಮಾಡಿದ್ದೀರಿ ಇಲ್ಲಿ ಕೇವಲ ಕೋಲಾರ ತೋರಿಸಿದ್ದೀರಿ. ಇವತ್ತು ಶಾಶ್ವತವಾಗಿ ನೀರು ನಮ್ಮ ಭಾಗಕ್ಕೆ ಬರದೆ ಹೋದರೆ ಇವತ್ತು ಕುಡಿಯುವ ನೀರಿಗೆ ಅವಾಂತರವಿದೆ. ಇವತ್ತು forces ಹೆಚ್ಚಿಗೆ ಆಗಿರುವಂಥ ಪ್ರದೇಶದಲ್ಲಿ ಆ ವಿಷ ನೀರು ಕುಡಿಯುತ್ತಿದ್ದಾರೆ. ಇಲ್ಲಿರುವ ಫೋಟೋ ನೋಡಿ, (ಈ ಹಂತದಲ್ಲಿ ಅವರ ಹತ್ತಿರ ಇರುವ ಫೋಟೋವನ್ನು ತೋರಿಸಲಾಯಿತು) ಎಲ್ಲಾ ಜನರು ಈ ತರಹ ಇದ್ದಾರೆ. ಜನರ ಪರಿಸ್ಥಿತಿ ಈ ತರಹ ಇದೆ. ಕುಡಿಯುವ ನೀರಿನಲ್ಲಿ

Floride ಯುಕ್ತ ನೀರು ಹೆಚ್ಚಿಗೆ ಆಗಿ Flurosis ನೀರು ಕುಡಿಯುತ್ತಿದ್ದಾರೆ. ಇವತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿಯೆ ಎಲ್ಲರೂ ಕೂಡ ಅಂಗವಿಲಕರೆ. ಒಂದಲ್ಲ ಒಂದು ರೀತಿಯಲ್ಲಿ ಅಂಗವಿಕಲರಾಗುತ್ತಿದ್ದಾರೆ. ಡಾ:ಅಬ್ದುಲ್ ಕಲಾಂರವರು ರಾಷ್ಟ್ರಪತಿ ಆಗಿದ್ದಂಥ ಸಂದರ್ಭದಲ್ಲಿ ಈ ಮಕ್ಕಳನ್ನೆಲ್ಲಾ ಅವರಿಗೆ ತೋರಿಸಿ ಕುಡಿಯುವ ನೀರು ಕೊಡಿ ಎಂದು ನಾನು ಅವರನ್ನು ಬೇಡಿಕೊಂಡಿದ್ದೇವೆ. ಇವತ್ತು ಕುಡಿಯುವ ನೀರಿನ ವಿಚಾರದಲ್ಲಿ ಒಂದು ಸಣ್ಣ ಕೆರೆಯನ್ನು ಮಾಡುವಾಗ ಅಂತರ್‌ರಾಜ್ಯದ ಒಳಜಗಳಗಳು ಬಂದಾಗ ಈ ಮಕ್ಕಳನ್ನೆಲ್ಲಾ ಅವರಿಗೆ ತೋರಿಸಬೇಕಾದ ಪರಿಸ್ಥಿತಿ ಬಂತು. ಇವತ್ತು ನಮ್ಮ ನೀರನ್ನು ನಮಗೆ ಕೊಡುವುದಕ್ಕೆ ಇವತ್ತಿನ ಸರ್ಕಾರಗಳಲ್ಲಿ ಸಾಧ್ಯವಾಗುತ್ತಿಲ್ಲ. ಈ ಸರ್ಕಾರಗಳು ಇವತ್ತು ಏನು ಮಾಡುತ್ತಿವೆ. ಇವತ್ತು ಹಂತ ಹಂತವಾಗಿ ವಿಷ ನೀರನ್ನು ಕುಡಿಯುತ್ತಿದ್ದಾರೆ. ಬೇಕಾದರೆ ಒಂದೆಸಾರಿ ವಿಷವನ್ನು ಕೊಟ್ಟು ಬಿಡಬೇಕು.

ಅಧ್ಯಕ್ಷರು: ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ಎನ್.ಸಂಪಂಗಿ: ಏಕೆಂದರೆ, ಬರಿ ಭರವಸೆಗಳು ಆಗಬಾರದು. ಇದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ.

ಅಧ್ಯಕ್ಷರು: ಸ್ಪಷ್ಟವಾಗಿ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಅವರಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಈ ಒಂದು ಅವಸರ, ಕಾಳಜಿ, ಕಳಕಳಿ 10–15 ವರ್ಷದ ಹಿಂದೆ ಇದ್ದಿದ್ದರೆ ಈ ಪರಿಸ್ಥಿತಿ ಇವತ್ತು ಬರುತ್ತಿರಲಿಲ್ಲ. ಅವತ್ತು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದರೆ ಈ ಮಟ್ಟಕ್ಕೆ ತೀವ್ರತೆ ಇರುತ್ತಿರಲಿಲ್ಲ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದಾಗಿ ನಮಗೆ ಸಂಪೂರ್ಣವಾದಂಥ ಅರಿವು ಇದೆ. ವಿಶೇಷವಾಗಿ ಚಿಕ್ಕಬಳ್ಳಾಪುರ, ಕೋಲಾರ ಮತ್ತು part of ತುಮಕೂರು ಮತ್ತು ಚಿತ್ರದುರ್ಗ, ಇಲ್ಲಿಯ ಜಲಸಂಪತ್ತು ಅದರ ಮಳೆಯನ್ನು ಹಿಡಿದು ಎಲ್ಲ ರೀತಿಯ ಕೆರೆಗಳನ್ನು ತುಂಬಿಸುವಂಥ ಹಳೆಯ ಕಾಲದ water flow ಏನಿತ್ತು ಅದು ಕಡಿಮೆಯಾಗಿದೆ. ಅದಕ್ಕೆ ಕಾರಣಗಳನ್ನು ಈ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಇನ್ನೊಂದು ಸಲ ಕೊಡುತ್ತೇನೆ. ಎರಡನೆಯದಾಗಿ ಅಲ್ಲಿಯ ಅಂತರ್ಜಲ ಕುಸಿದಿದೆ. ಮೂರನೆಯದಾಗಿ ಇವೆಲ್ಲಾ ಕೂಡ higher altitude ಪ್ರದೇಶದಲ್ಲಿರುವುದರಿಂದ ನಮ್ಮ ಸಾಮಾನ್ಯ ನೀರಾವರಿ ಯೋಜನೆ ಅಡಿಯಲ್ಲಿ,

flow irrigation ನಲ್ಲಿ ಇವುಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದಾಗ್ಯೂ ಕೂಡ ಇವತ್ತು ನಮ್ಮ ಸರ್ಕಾರ ಇದನ್ನು ಯಾವುದಾದರೂ ರೂಪದಲ್ಲಿ ಶಾಶ್ವತವಾಗಿ ಪರಿಹಾರ ಮಾಡಬೇಕೆನ್ನುವ ದೃಷ್ಟಿಯಿಂದ ಹಿಂದಿನ ಸರ್ಕಾರ ಕೂಡ ಪ್ರಯತ್ನ ಮಾಡಿದೆ. ಆ ಸಂದರ್ಭದಲ್ಲಿ ಡಾ:ಪರಮಶಿವಯ್ಯನವರು ಒಂದು ವರದಿಯನ್ನು ಕೊಟ್ಟಿದ್ದರು. ಆ ವರದಿಯನ್ನು ಇವತ್ತು NRECಗೆ ಒದಗಿಸಿದ ಮೇಲೆ 7–8ನೇ ತಿಂಗಳಲ್ಲಿ ಅದರ ಒಂದು Airbone Laser Trial Mapping ಮಾಡಿಕೊಟ್ಟಿದ್ದಾರೆ. 5ಮೀಟರ್ ಒಂದು ಲಿಮಿಟ್‌ಗೆ ಸರ್ವೆಯನ್ನು ಮಾಡಿದ್ದಾರೆ. ಡಾ:ಪರಮಶಿವಯ್ಯನವರ ವರದಿ ಅನ್ವಯ ಸುಮಾರು 200 TMCಗಿಂತ ಹೆಚ್ಚು ನಾವು ತಿರುಗಿಸಬಹುದು. ಆದರೆ ಅಲ್ಲಿ ಪರಿಸರ ಮತ್ತು ಇನ್ನಿತರ ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ, ಆಗುತ್ತದೆಂದು ನಾನು ಹೇಳುವುದಿಲ್ಲ. ಅದನ್ನು ಕೂಡ ನಾವು ಗಮನಿಸಬೇಕಾಗುತ್ತದೆ. ಈ ಮಧ್ಯೆ ಯಾವುದೆ ರೀತಿಯ ಪರಿಸರಗಳಿಗೆ ತೊಂದರೆಯಾಗದಂತೆ ಡಾ:ಪರಮಶಿವಯ್ಯನವರ ವರದಿ ಆಧಾರದ ಮೇಲೆ ಸಮಗ್ರವಾದಂಥ ಯೋಜನೆಯನ್ನು ರೂಪಿಸುವುದಕ್ಕೆ ಈಗಾಗಲೇ ನಾವು ಕ್ರಮವನ್ನು ಜರುಗಿಸಿರುತ್ತೇವೆ. ಈಗಾಗಲೇ DPR ಮಾಡುವುದಕ್ಕೆ ಟೆಂಡರ್ ಕೂಡ ಕರೆದಿರುತ್ತೇವೆ. ಅದು ಕೂಡ ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಸರ್ಕಾರವು ಇದ್ದನ್ನು ಗಂಭೀರವಾಗಿ ಮುಂದುವರಿಸಿಕೊಂಡು ಹೋಗುತ್ತದೆ. ಈ ಮಧ್ಯೆ ಎತ್ತಿನಹೊಳೆ ಎನ್ನುವ ಒಂದು ಪ್ರದೇಶದಿಂದ ಸುಮಾರು 10 ಟಿಎಂಸಿ ನೀರು ಅದಕ್ಕೆ ಒದಗಿಬರುತ್ತದೆ. ಅದನ್ನು ನೇರವಾಗಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಮತ್ತು ತುಮಕೂರಿಗೆ ನೀರನ್ನು ಒದಗಿಸುವ ಸಲುವಾಗಿ ಒಂದು ಯೋಜನೆಯನ್ನು ರೂಪಿಸಿದ್ದೇವೆ. ಆ ಯೋಜನೆಯ feasible report ಕೂಡ ಆಗಿದೆ. ಈಗ Lieder Technology ಎಂದು laser beam ಅನ್ನು ಇಟ್ಟುಕೊಂಡು ಕೂಡಲೇ ಸರ್ವೆ ಮಾಡುವಂತಹದ್ದು, ಅತಿ ಕಡಿಮೆ ಸಮಯದಲ್ಲಿ survive ಆಗುವಂತಹದ್ದು. ದೇಶದಲ್ಲಿ ಅದನ್ನು ಮೊದಲನೆಯ ಬಾರಿಗೆ ಅದನ್ನು ನಾವು ಇಲ್ಲಿ ಪ್ರಯೋಗ ಮಾಡುತ್ತಿದ್ದೇವೆ. ಅದನ್ನು ಈ ಯೋಜನೆಗೆ ಬಳಸಬೇಕೆಂದು ಈಗಾಗಲೇ ನಾವು ತೀರ್ಮಾನವನ್ನು ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ಇವತ್ತು ಆದಷ್ಟು ಬೇಗನೆ ಆ ಬಗ್ಗೆ DPR ಕೂಡ ರೆಡಿ ಆಗುತ್ತಿದೆ. ಪ್ರಸ್ತುತ ವರ್ಷದಲ್ಲಿಯೆ ಆ ಯೋಜನೆಗೆ ಚಾಲನೆಯನ್ನು ನಾವು ಕೊಡುತ್ತೇವೆ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳು

ಬಜೆಟ್‌ನಲ್ಲಿ 200 ಕೋಟಿ ರೂಪಾಯಿಗಳನ್ನು ಒದಗಿಸಿರುವುದನ್ನು ತಾವು ಗಮನಿಸಿದ್ದೀರೆಂದು ನಾನು ಭಾವಿಸುತ್ತೇನೆ. ಇದೇ ವರ್ಷ ಎತ್ತಿನಹೊಳೆ ಯೋಜನೆಯನ್ನು ನಾವು ಪ್ರಾರಂಭ ಮಾಡುತ್ತೇವೆ. ಅದು ಅಲ್ಲದೆ ಡಾ: ಪರಮಶಿವಯ್ಯನವರ ವರದಿಯ DPR ಬಂದ ತಕ್ಷಣ ಹಂತಹಂತವಾಗಿ ಆ ಯೋಜನೆಯನ್ನು ಕೂಡ ಅನುಷ್ಠಾನ ಮಾಡುತ್ತೇವೆ. ಒಟ್ಟಾರೆಯಾಗಿ ನಮ್ಮ ಉದ್ದೇಶವು ಸಫಲವಾಗಬೇಕು. ಇದು ಒಂದೇ ದಿವಸಕ್ಕೆ ಆಗುವಂತಹ ಕೆಲಸವಲ್ಲ. ಸುಮಾರು 350 ಕಿ.ಮಿ. ದೂರದಿಂದ ಬೇರೆ ಬೇರೆ terminalನಿಂದ ಬರುವಂತಹದ್ದು. ಆದರೂ ಕೂಡ ನೀರನ್ನು ಕೊಡುವಂತಹದ್ದು ಅವಶ್ಯಕತೆ ಇದೆ. ಅದು ನಮ್ಮ ಕರ್ತವ್ಯವು ಕೂಡ ಇದೆ. ಇದಕ್ಕೆ ನಾವು ಬದ್ದರಾಗಿದ್ದೇವೆ. ಆ ಹಿನ್ನೆಲೆಯಲ್ಲಿ ಎಷ್ಟೇ ಕಷ್ಟವಾದರೂ ಕೂಡ ಈ ವರ್ಷ ಪ್ರಾರಂಭ ಮಾಡಿ ಅತೀ ಹೊಸ technology ಅನ್ನು use ಮಾಡಿ, ಅದಕ್ಕೆ pipeline ಹಾಕಿದ್ದೇವೆ. ಬೇರೆ ಬೇರೆ land acquisition problem ಬರಬಾರದು ecological environmental problem ಬರಬಾರದೆಂಬ ಕಾರಣದಿಂದ ಸ್ವಲ್ಪ ದುಡ್ಡು ಹೆಚ್ಚಾದರೂ ಪರವಾಗಿಲ್ಲ, ನೀರನ್ನು ಶಾಶ್ವತ ರೂಪದಲ್ಲಿ ಕೊಡಬೇಕೆನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ. ಈ ವರ್ಷ ಅದನ್ನು ಕಾರ್ಯಗತ ಮಾಡಬೇಕೆನ್ನುವ ನಮ್ಮ ಉದ್ದೇಶವಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಬಹಳ ವರ್ಷದ ಹಿಂದೆಯೇ ಯೋಚನೆ ಮಾಡಿದರೆ ಚೆನ್ನಾಗಿರುತ್ತಿತ್ತು ಎನ್ನುವ ಮಾತನ್ನು ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಿದ್ದಾರೆ. ಹಿಂದೆ ಪರಗೋಡನ್ನು ಮಾಡಬೇಕಾದಾಗ ಏನು ಕಷ್ಟವಾಯಿತೆಂದು ನಿಮಗೂ ಸಹ ಗೊತ್ತಿದೆ. ಬಹುಶಃ ಕೋಲಾರ ಹಾಗೂ ಬಿಜಾಪುರವನ್ನು ನೋಡಿಯೇ ಜಲಸಂವರ್ಧನೆ ಯೋಜನೆಯನ್ನು ತಂದಿದ್ದು. ಈ ಎಲ್ಲಾ ಪ್ರಯತ್ನಗಳು ಹಾಗೂ ಮನುಷ್ಯನ ಪ್ರಯತ್ನವು ಮುಗಿದುಹೋಗಿದೆ. ಇನ್ನು ಶಾಶ್ವತವಾದ ಯೋಜನೆಗಳನ್ನು ತರಬೇಕಾದಾಗ ನಿಮಗೆ ಒಂದು ಅವಕಾಶವಿದೆ. ಕೃಷ್ಣ ನ್ಯಾಯಾಧೀಕರಣದ ತೀರ್ಪು ಬಂದಿರುವುದು ನಮ್ಮ ಸರ್ಕಾರ, ತಾವು ಮುಖ್ಯಮಂತ್ರಿಗಳಾಗಿ ಬಂದ ಮೇಲೆಯೇ. ಹಾಗಾಗಿ ನಿಮಗೆ ಹೆಚ್ಚಿನ ಅವಕಾಶವಿದೆ. NREC report ಬಂದಿರುವುದು ಈಗ. ನನ್ನ ಒಂದು ಸಲಹೆ ಏನೆಂದರೆ, ನೀವು ಕೋಲಾರಕ್ಕೆ ಎತ್ತಿನಹೊಳೆಯಿಂದ ನೀರನ್ನು ಕೊಡುತ್ತೇವೆ, ಅದಕ್ಕಾಗಿ 8,000 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದೇವೆಂದು ನೀವು ಏನು ಹೇಳಿದ್ದೀರಿ ಅದು ನಮಗೆ ಗೊತ್ತಿದೆ. ಆದರೆ,

ಅದೇ ರೀತಿಯಾಗಿ ಭದ್ರಾ ಮೇಲ್ದಂಡೆ ಯೋಜನೆಯ ಮುಖೇನವು ಕೂಡ ನಾವು ಕೆರೆಗಳನ್ನು ತುಂಬಿಸುತ್ತೇವೆನ್ನುವಂತಹ ಮಾತನ್ನು ಹೇಳಿದ್ದೀರಿ. Single ಆಗಿ ಒಂದೊಂದು project ಅನು ನೋಡುವ ಬದಲು comprehensive ಆಗಿ ಮಾಡಬೇಕು. ಏತಕ್ಕಾಗಿ ನಾನು ಹೇಳುತ್ತೇನೆಂದರೆ, ಎತ್ತಿನಹೊಳೆಯಿಂದ ನೀರನ್ನು ಹೇಮಾವತಿ ಕೊಳ್ಳಕ್ಕೆ ನೀವು ತಂದು ತದನಂತರ ಅದನ್ನು ಎಲ್ಲಿಯವರೆಗೆ ಅಂದರೆ ನೀವು ಭದ್ರಾ ನೀರನ್ನು ನೀವು ಎಲ್ಲಿ link ಮಾಡುತ್ತೀರಿ ಅಲ್ಲಿಂದ ಮುಂದಕ್ಕೆ ನೀವು life ಮಾಡುವುದಾದರೆ savings ಆಗುತ್ತದೆ ಒಂದೊಂದೇ project ಅನ್ನು ನೀವು single ಆಗಿ ಮಾಡುವ ಬದಲು comprehensive ಆಗಿ ನೀವು study ಮಾಡಿ, ಕೋಲಾರ, ತುಮಕೂರು, ಚಿತ್ರದುರ್ಗ ಈ ಭಾಗಗಳಿಗೆ ನೀರು ಕೊಡಬೇಕಾದಾಗ ಯಾವ ಯಾವ ಮೂಲದಿಂದ ಬರುವುದಕ್ಕೆ ಸಾಧ್ಯ, ಯಾವ ಯಾವ ಯೋಜನೆಗಳನ್ನು ಮಾಡಬೇಕು ಎಂಬುದನ್ನು ಒಂದು master plan ಅನ್ನು ಇಟ್ಟುಕೊಂಡು ಮಾಡಿದರೆ ನೀವು ಎಲ್ಲಿ supplement ಮಾಡಬೇಕು ಎನ್ನುವುದು ಗೊತ್ತಾಗುತ್ತದೆ, ಮತ್ತು ಪೈಪ್‌ನಲ್ಲಿ ತೆಗೆದುಕೊಂಡು ಹೋಗುವುದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಅದರ ಬಗ್ಗೆ ಸ್ಪಷ್ಟವಾದಂತಹ ವಿಚಾರವನ್ನು ಹೇಳಿ. ಏಕೆಂದರೆ ಕೋಲಾರದಲ್ಲಿ ದೊಡ್ಡದಾದ ಸಮಸ್ಯೆಯಾಗಿದೆ. ಮಾನ್ಯ ಸಚಿವರು ಹೇಳುತ್ತಿರುವುದು ನಿಜ. ಅದಕ್ಕೆ ಎಲ್ಲೋ ಒಂಡು ಕಡೆಗೆ ಸರ್ಕಾರ ಅವರಿಗೆ ಸ್ವಲ್ಪ ನಿರ್ದಿಷ್ಟವಾಗಿರುವಂತಹ ರೀತಿಯಲ್ಲಿ ನಂಬುವಂತಹ ರೀತಿಯಲ್ಲಿ ಆ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಎನ್. ಸಂಪಂಗಿ: ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದರ ಬಗ್ಗೆ ನಮಗೆ ಯಾವುದೇ ಅನುಮಾನವಿಲ್ಲ. ಏಕೆಂದರೆ, ನಾವು ತುಟ್ಟತುದಿಯಲ್ಲಿರುವಂತಹವರು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹೆಚ್ಚಿಗೆ Fluorosis ಇರುವುದರಿಂದ ಹೆಚ್ಚಿಗೆ ಸಮಸ್ಯೆಯಿದೆ. ಈ ಒಂದು ಎತ್ತಿನಹೊಳೆಯಿಂದ ಪೈಪ್‌ಲೈನ್ ಮುಖಾಂತರ ತರುವಂತಹ ನೀರು ಅದು ನಮಗೆ ಬಹಳ ಮುಖ್ಯ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರು 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದಕ್ಕಾಗಿ ಒಟ್ಟಾರೆ 800 ಕೋಟಿ ರೂಪಾಯಿಗಳು ಇದೆ. ಇದು ಒಂದು ಯೋಜನೆಯಗಲಿ. ಅದರ ಜೊತೆಯಲ್ಲಿ ಡಾ: ಪರಮಶಿವಯ್ಯನವರ ಯೋಜನೆ ಏನಿದೆಯೋ ಅದನ್ನು ಕೂಡ ಅವರು

ಪೂರ್ತಿ ಮಾಡಬೇಕಾಗುತ್ತದೆ. ಏಕೆಂದರೆ, ಇವತ್ತು ಯಾರು ಮಾಡಿಲ್ಲ. ನಾವು ಮಾಡಿದ್ದೇವೆ ಎಂದು ಏನು ಹೇಳಿದ್ದಾರೆ ಅದು ಸಂತೋಷ.

ಅಧ್ಯಕ್ಷರು: ಇದನ್ನು ಕೈಗೆತ್ತಿಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಬೇರೆ ಏನಾದರೂ ಇದ್ದರೆ ಕೇಳಿ.

ಶ್ರೀ ಎನ್. ಸಂಪಂಗಿ: ಆದರೆ ಇದು ಭರವಸೆಯಾಗಬಾರದು.

ಅಧ್ಯಕ್ಷರು: ಹೇಳಿದ್ದನ್ನೇ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಎನ್. ಸಂಪಂಗಿ: 2008ರಲ್ಲಿ ಬಸವರಾಜ್ ಬೊಮ್ಮಾಯಿಯವರು ಒಂದು ಭರವಸೆಯನ್ನು ಕೊಟ್ಟರು. ಭದ್ರಾ ಮೇಲ್ದಂಡೆ ನೀರನ್ನು ಚಿಕ್ಕಬಳ್ಳಾಪುರಕ್ಕೂ ಹರಿಸುತ್ತೇವೆ. ಕುಡಿಯುವ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಅದು ಇವತ್ತಿನವರೆಗೂ ಕೂಡ ಭರವಸೆಯಾಗಿಯೇ ಉಳಿದಿದೆ. ಇವತ್ತಿನವರೆಗೂ ಕೂಡ ಅದನ್ನು ಮಾಡಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಇವೆಲ್ಲವೂ ಅವರಿಗೆ ಗೊತ್ತಿದೆ. Comprehensive ಆಗಿ ಚಿಂತನೆ ಮಾಡಬೇಕೆಂದು ಮಾನ್ಯ ಜಯಚಂದ್ರರವರು ಹೇಳಿದ್ದಾರೆ. ಈಗಾಗಲೇ ನಾವು ಅವರು 2–3 ಸಾರಿ ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದೇವೆ. ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಡಾ: ಪರಮಶಿವಯ್ಯನವರ ವರದಿಯನ್ನು ಅನುಷ್ಠಾನ ಮಾಡುವುದಕ್ಕೆ ಗಂಭೀರವಾಗಿ ಮಾಡುತ್ತಿರುವುದರಿಂದ tender notification ಮಾಡಿದ್ದೇವೆ. ಖಂಡಿತವಾಗಿಯೂ ಆ ಕೆಲಸವನ್ನು ಮಾಡುತ್ತೇವೆ. ಯಾವ ಯಾವ ಮೂಲದಿಂದ ಬರುವುದಕ್ಕೆ ಸಾಧ್ಯವೆಂದು ಅವರು ಕೇಳಿದ್ದಾರೆ, ಅವೆಲ್ಲವನ್ನು ಮಾಡೋಣ, ಆ ಹಿನ್ನೆಲೆಯಲ್ಲಿ Upper Bhadra Projectನಲ್ಲಿ 19 ಕೆರೆಗಳನ್ನು ತುಂಬಿಸುವಂತಹ ಯೋಜನೆ ಇದೆ. ಸರ್ವೆ ಕಾರ್ಯ ಮುಗಿದಿದೆ. ಆ ಕೆಲಸವನ್ನೂ ಸಹ ತೆಗೆದುಕೊಳ್ಳುತ್ತೇವೆ. ಆದರೆ ಅಲ್ಲಿರುವಂತಹ ತೊಂದರೆಗಳನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಭದ್ರಾದಿಂದ ನೀರು ಬರುವಂತಹ ಸಂದರ್ಭದಲ್ಲಿ ತರಿಕೆರೆ ರೈತರು ಅದಕ್ಕೆ ಅಡ್ಡಹಾಕಿದ್ದಾರೆ. ಆದ್ದರಿಂದ ಇದು ನಿಮಗೆಲ್ಲಾ ಗೊತ್ತಿರುವಂತಹ ವಿಚಾರವಾಗಿದೆ. ಅದಕ್ಕೆ ನಿಮ್ಮ ಸಹಕಾರವು ಬೇಕಾಗಿದೆ. ಅದಕ್ಕೆ ನಿಮ್ಮ ನಾಯಕರು ಕೂಡ ಅಡ್ಡಹಾಕಿದ್ದಾರೆ. ಅದಕ್ಕೆ ನಿಮ್ಮ ಸಹಕಾರವು ಕೂಡ ಇರಲಿ. ಇವತ್ತು ಬಹುತೇಕವಾಗಿ ಅಡ್ಡ ಹಾಕದಿದ್ದರೆ ಆವತ್ತು ಅಜ್ಜಂಪುರಕ್ಕೆ ಈಗಾಗಲೇ ನೀರು ಬರುತ್ತಿತ್ತು. ನಾವು 2008ರಲ್ಲಿಯೇ ಆ ಕಾಮಗಾರಿಗಳಿಗೆ ಅನುಮತಿಯನ್ನು ಕೊಟ್ಟಿರುತ್ತೇವೆ. ಆ ಎಲ್ಲಾ ಅಡೆತಡೆಗಳನ್ನು

ದೂರಮಾಡಿ ಆ ಕೆಲಸವನ್ನು ಮಾಡುತ್ತಿದ್ದೇವೆ. ಖಂಡಿತವಾಗಿಯೂ Upper Bhadra ಯೋಜನೆಯಲ್ಲಿ ಕೆಲವೊಂದು ಮಾರ್ಪಾಟು ಮಾಡುತ್ತೇವೆನ್ನುವ ಚಿಂತನೆಯು ನಮ್ಮದು ಹಾಗೂ ಮಾನ್ಯ ಜಯಚಂದ್ರರವರದ್ದು, ನಿಮ್ಮದು ಆಗಿದೆ. ನಾವು ಯಾವುದೇ ರೀತಿಯ ಹಣವನ್ನು ಉಳಿಸುವಂತಹದ್ದು gravity flow ಇದರಲ್ಲಿ ಆಗುವುದಕ್ಕೆ ಮುಕ್ತವಾದ ಮನಸ್ಸು ಇದೆ. ಎಲ್ಲವನ್ನು lift ಮುಖಾಂತರ ಮಾಡುವುದು ಅಥವಾ pipe ಮುಖಾಂತರ ತರುವುದು ಎಷ್ಟು ಕಷ್ಟಸಾಧ್ಯ, ಅದಕ್ಕೆ maintenance charge ಏನು ಮತ್ತು capital charge ಏನು ಎಂಬುದರ ಅರಿವು ನನಗೆ ಇದೆ. ನಾನು ಆ ಹೊಣೆಗಾರಿಕೆಯಿಂದ ಮಾತನಾಡುತ್ತಿದ್ದೇನೆ. ಆದರೆ ಎತ್ತರ ಪ್ರದೇಶದಲ್ಲಿ ಅನಿವಾರ್ಯವಿದ್ದಾಗ ಏನು ಮಾಡುವುದಕ್ಕೆ ಸಾಧ್ಯವಿಲ್ಲ ಅದನ್ನು ನಾವು ಮಾಡಲೇಬೇಕಾಗುತ್ತದೆ. ಇವತ್ತು ನಾವು ಹೇಮಾವತಿ ನೀರನ್ನು ಹಾಕಿದರೆ ಅದು Tribunal ಮುಂದೆ Supreme Courtನಲ್ಲಿ case ಇದೆ. ಅಲ್ಲಿ ಆ ಬಗ್ಗೆ ಏನಾಗುತ್ತದೆ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಆದರೆ ತುರ್ತಾಗಿ ನಮ್ಮ ಮುಂದೆ ಇರುವಂತಹದ್ದು, ಒಂದು Long Term ಇನ್ನೊಂದು Short Term. Short Termನಲ್ಲಿ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ರೂರಲ್‌ನಲ್ಲಿ ಇರುವಂತಹದದು. ಸುಮಾರು 1,500 feet ಕೆಳಗಡೆ ಹೋಗಿದೆ. ನಾವು ಆ ಭಾಗಕ್ಕೆ ತುರ್ತಾಗಿ ನೀರನ್ನು ಕೊಡದೆ ಇದ್ದರೆ ಅಲ್ಲಿಯ ಜನರು ಆ ಪ್ರದೇಶದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಅಂತಹ ಕೆಲಸವನ್ನು war-footingನಲ್ಲಿ ಮಾಡುವ ಸಲುವಾಗಿ Short Term ಮತ್ತು Long Term ಎರಡನ್ನು measure ಮಾಡುತ್ತಿದ್ದೇವೆ. ಖಂಡಿತವಾಗಿಯೂ ಆ ಕೆಲಸವನ್ನು ಪ್ರಸ್ತುತ ವರ್ಷದಲ್ಲಿಯೇ ಏನು ನಾವು ಇದುವರೆಗೂ ಕಾಮಗಾರಿಯನ್ನು ನೋಡಿರುವುದಿಲ್ಲ. ಆ ಕೆಲಸವನ್ನು ಈ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು: ಸುರೇಶ್ ಮಾರಿಹಾಳ್ ಶಿವರುದ್ರಪ್ಪರವು ಸದನದಲ್ಲಿ ಇಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 07.03.2011ರ 6ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 75 ಪ್ರಶ್ನೆಗಳ ಪೈಕಿ 61 ಪ್ರಶ್ನೆಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.